**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಓ ಎಸ್ 65/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 01-09-2025** **ಡಿ ಡಬ್ಲ್ಯೂ 1**

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಟಿ ಎ ಪಿ ವಕೀಲರಿಂದಃ

ನಾನು 2 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಜನ್ಮ ದಿನಾಂಕಃ 01.06.1967. ನನಗೆ ವಾದಿ ಮತ್ತು ಪ್ರತಿವಾದಿಯ ಕುಟುಂಬದ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ವಾದಿ ಪ್ರಸ್ತುತ ದಾವೆಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮತ್ತು ವಾದಿಯ ಕುಟುಂಬದ ಮೂಲ ಪುರುಷ ಸಿದ್ದಬಸಪ್ಪ ಎಂದರೆ ಸರಿ. ಸದರಿ ಸಿದ್ದಬಸಪ್ಪನವರಿಗೆ 5 ಜನ ಗಂಡು ಮಕ್ಕಳು ಮಾತ್ರ. ಮೊದಲನೇಯವರು ಮರಳಸಿದ್ದಪ್ಪ ಯಾನೇ ಮರುಳಪ್ಪ, 2 ನೇ ಮಗ ಮಹಾದೇವಪ್ಪ, 3 ನೇ ಮಗ ರುದ್ರಪ್ಪ, 4 ನೇ ಮಗ ವೀರಭದ್ರಪ್ಪ ಮತ್ತು 5 ನೇ ಮಗ ಬಸಪ್ಪ. ಸದರಿಯವರೆಲ್ಲರೂ ಪೌತಿಯಾಗಿರುತ್ತಾರೆ ಎಂದರೆ ಸರಿ. ಸದರಿಯವರಲ್ಲಿ ರುದ್ರಪ್ಪ ಅವಿವಾಹಿತನಾಗಿ ಮೃತನಾಗಿದ್ದು ಉಳಿದವರೆಲ್ಲರೂ ಸಿದ್ದಬಸಪ್ಪನವರ ಒಟ್ಟು ಕುಟುಂಬದ ಆಸ್ತಿಯನ್ನು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾಲು ವಿಭಾಗಕ್ಕೆ ಬನ್ನಿಕೋಡು ಗ್ರಾಮದ ಸರ್ವೆ ನಂ. 135 ರಲ್ಲಿ 11 ಎಕರೆ 2 ಗುಂಟೆ ಜಮೀನು ಮರುಳಪ್ಪನವರ ಹಿಸ್ಸೆಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಬನ್ನಿಕೋಡು ಗ್ರಾಮದ ಸರ್ವೆ ನಂ. 135 ರಲ್ಲಿ 11 ಎಕರೆ 4 ಗುಂಟೆ ಜಮೀನು ವೀರಭದ್ರಪ್ಪ ನವರ ಹಿಸ್ಸೆಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವೀರಭದ್ರಪ್ಪನವರಿಗೆ ಒಬ್ಬ ಗಂಡು ಮಗ, ಹೆಣ್ಣು ಮಕ್ಕಳ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಗಂಡು ಮಗನ ಹೆಸರು ರುದ್ರಪ್ಪ. ಅದೇ ರೀತಿ ಮರುಳಪ್ಪನಿಗೆ ಒಬ್ಬನೇ ಗಂಡು ಮಗ. ಸದರಿಯವರ ಹೆಸರು ಕಾಡಪ್ಪ. ಸದರಿ ಕಾಡಪ್ಪನಿಗೆ ಇಬ್ಬರು ಗಂಡು ಮ್ಕಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ಸದರಿಯವರೆಂದರೆ ಉಜ್ಜೆನಪ್ಪ ಮತ್ತು ತಿಪ್ಪಣ್ಣ. ಸದರಿ ತಿಪ್ಪಣ್ಣನ ಮಕ್ಕಳು ನಾನು ಮತ್ತು 2 ಮತ್ತು 3 ನೇ ಪ್ರತಿವಾದಿಯರು ಎಂದರೆ ಸರಿ. 1 ನೇ ಪ್ರತಿವಾದಿ ಉಜ್ಜೆನಪ್ಪನವರ ಮಗ ಎಂದರೆ ಸರಿ.

ನನಗೆ ಹಾಗೂ ನನ್ನ ತಂದೆಗೆ ಯಾವ ಯಾವ ಸರ್ವೆ ನಂಬರಿನಲ್ಲಿ ಜಮೀನು ಇವೆ ಎಂದು ನನಗೆ ಹೇಳಲು ಬರುತ್ತವೆ. ಬನ್ನಿಕೋಡು ಗ್ರಾಮ ಸರ್ವೆ ನಂ. 128/2 ರಲ್ಲಿ 1 ಎಕರೆ 19 ಗುಂಟೆ ಜಮೀನು ನನ್ನ ಅಣ್ಣ 2 ನೇ ಪ್ರತಿವಾದಿಯ ಹೆಸರಿಗೆ ಇತ್ತು. ಬನ್ನಿಕೋಡು ಗ್ರಾಮ ಸರ್ವೆ ನಂ. 135/1 ರಲ್ಲಿ 3 ವರೆ ಎಕರೆ ಜಮೀನಿನಲ್ಲಿ ರಾಜಪ್ಪನ ಹೆಸರಿಗೆ 1 ಎಕರೆ 1 ವರೆ ಗುಂಟೆ ಜಮೀನು, ಮಂಜಪ್ಪನವರ ಹೆಸರಿನಲ್ಲಿ 2 ಎಕರೆ, ಶಾರದಮ್ಮ ಅಂದರೆ ಪ್ರತಿವಾದಿಯರ ತಾಯಿ ಹೆಸರಿಗೆ 30 ಗುಂಟೆ ಜಮೀನು ಇದೆ.

ಬನ್ನಿಕೋಡು ಗ್ರಾಮ ಸರ್ವೆ ನಂ. 135/3 ರಲ್ಲಿ 2 ಎಕರೆ ಶಣ್ಮುಖಪ್ಪ 3 ನೇ ಪ್ರತಿವಾದಿ ಹೆಸರಿಗೆ ಹಾಗೂ ನನ್ನ ಹೆಸರಿಗೆ 38 ಗುಂಟೆ ಜಮೀನು ಇದೆ.

ನಿಡಿ.54 ನಾನು ಸಲ್ಲಿಸಿದ ದಾಖಲೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಸರ್ವೆ ನಂ. 128/2 ರಲ್ಲಿ 3 ಎಕರೆ 18 ಗುಂಟೆ, ಸರ್ವೆ ನಂ. 135/1 ರಲ್ಲಿ 7 ಎಕರೆ 23 ಗುಂಟೆ ಜಮೀನು ಮತ್ತು ಸರ್ವೆ ನಂ. 135/3 ರಲ್ಲಿ 11 ಎಕರೆ 4 ಗುಂಟೆ ಜಮೀನು ಎಂದು ಇದೆ ಎಂದರೆ ಸರಿ. ಸರ್ವೆ ನಂ. 128/2 ರಲ್ಲಿ 3 ಎಕರೆ 18 ಗುಂಟೆ, ಸರ್ವೆ ನಂ. 135/1 ರಲ್ಲಿ 7 ಎಕರೆ 23 ಗುಂಟೆ ಜಮೀನು ಮರುಳಪ್ಪ ತಂದೆ ಸಿದ್ದಬಸಪ್ಪನವರ ಹಿಸ್ಸೆಗೆ ಬಂದ ಜಮೀನು ಎಂದರೆ ಸರಿ. ಸರ್ವೆ ನಂ. 135/3 ರಲ್ಲಿ 11 ಎಕರೆ 4 ಗುಂಟೆ ಜಮೀನು ವೀರಭದ್ರಪ್ಪ ತಂದೆ ಸಿದ್ದಬಸಪ್ಪ ನವರ ಹಿಸ್ಸೆಗೆ ಬಂದ ಜಮೀನು ಎಂದರೆ ಸರಿ. ಐಎಸ್ ಸಿ ದಾಖಲೆಯಲ್ಲಿ ವ್ಯಕ್ತಿ ತೀರಿಕೊಂಡ ನಂತರ ಅವರ ವಾರಸುದಾರರಿಗೆ ಖಾತೆ ಮಾಡುತ್ತಾರೆ ಎಂದರೆ ಸರಿ. ಪಾಲು ವಿಭಾಗ ಅಥವಾ ಜುಬಾನಿ ಪಾರಿಕತ್ತು ಇದ್ದರೆ ಅದಕ್ಕೆ ಬೇರೆ ನಿಯಮಗಳು ಇವೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಐಎಸ್ ಸಿ ದಾಖಲೆಗಳನ್ವಯ ಪಾಲು ವಿಭಾಗ ಅಥವಾ ಹಂಚಿಕೆ ಮಾಡಿಕೊಳ್ಳಲು ಕಾನೂನು ಅಡಿ ಅವಕಾಶ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ.4 ರಲ್ಲಿ ಎಲ್ಲಾ ಸರ್ವೆ ನಂಬರುಗಳ ವಿಸ್ತೀರ್ಣಗಳಲ್ಲಿ ತಿದ್ದುಪಡಿ ಆಗಿದೆ ಎಂದರೆ ಸಾಕ್ಷಿಯು ಸರ್ವೆ ನಂ.128/2 ರಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ.54 ರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮಂಜೂರು ಮಾಡಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ